ನ್ಯಾಷನಲ್ ಕಾಂಪಿಟೇಟೀವ್ ಬಿಡ್ಡಿಂಗ್ (ಐಸಿಬಿ) ಮೂಲಕವೇ ವಿದ್ಯುತ್ ಉಪಕರಣಗಳನ್ನು ಮತ್ತು ಸಾಮಗ್ರಿಗಳನ್ನು ಖರೀದಿಸಬೇಕಾಗಿದೆ. ಇದು ಹೆಚ್ಚು ಸಮಯವನ್ನು ತೆಗೆದುಕೊಳ್ಳವುದಿಂದ ವಿದ್ಯುತ್ ಉಪಕರಣಗಳನ್ನು ಸಾಮಗ್ರಿಗಳನ್ನು ಖರೀದಿಸುವಲ್ಲಿ ವಿಳಂಬ ಉಂಟಾಗುವುದರಿಂದ ಅನಿವಾರ್ಯವಾಗಿದೆ.

ಶ್ರೀ ಶರಣಪ ಬಸಪ್ಪದರ್ಶನಪೂರ್
(ಇಂಧನ ಸಚಿವರು)

ವಿಷಯ:- ಕರ್ನಾಟಕ ವಿದ್ಯುತ್ ಮಂಡಳಿಯ ಉಡುಪಿ ನಗರ ಉಪವಿಭಾಗವನ್ನು ವಿಭಾಗಿಸಿ ಉಡುಪಿ ಉಪವಿಭಾಗವನ್ನು ಪ್ರಾರಂಭಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 104 (362)

ಶ್ರೀ ಯು.ಆರ್.ಸಭಾಪತಿ (ಉಡುಪಿ)

ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರಾ

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಉಡುಪಿ ನಗರ ವಿಭಾಗವನ್ನು ವಿಭಾಗಿಸಿ ಉಡುಪಿ ಉಪ ವಿಭಾಗವನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?:- ಉಡುಪಿ ನಗರ ವಿಭಾಗವನ್ನು ವಿಭಾಜಿಸಿ ಉಡುಪಿ ಉಪ ವಿಭಾಗ-2ನ್ನು ಪ್ರಾರಂಭಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಈ ಉಪವಿಭಾಗವನ್ನು ಪ್ರಾರಂಭಿಸಲು ಸರ್ಕಾರದವರು ಅನುಮೋದನೆ ನೀಡಿದ್ದಾರೆಯೆ?:- ಇಲ್ಲ

ಇ) ಅನುಮೋದನೆ ದೊರಕಿಲ್ಲವಾದರೆ ಯಾವಾಗ ನೀಡಲಾಗುವುದು?:- ಈ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಿದ ನಂತರ ಈ ವಿಷಯದಲ್ಲಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಶರಣಪ ಬಸಪ್ಪದರ್ಶನಪೂರ್
(ಇಂಧನ ಸಚಿವರು)

ವಿಷಯ:- ರಾಜ್ಯದಲ್ಲಿ ಲೈನ್‌ಮನ್‌ಗಳ ಕೊರತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 105 (396ಎ)

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ 'ಲೆನ್‌ಮನ್' ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಇವರನ್ನು ನೇಮಿಸಿಕೊಳ್ಳಲು ಏಕೆ ತಡವಾಗುತ್ತಿದೆ. ಲೈನ್‌ಮನ್‌ಗಳ ಕೊರತೆಯಿಂದಾಗಿ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಸಾಧ್ಯವಾಗುವುದಿಲ್ಲವಾದ್ದರಿಂದ ಖಾಸಗಿಯವರಿಗೆ ಈ ಕೆಲಸ ಕೊಡಲು ಸರ್ಕಾರವು ಯೋಚಿಸುತ್ತಿದೆಯೇ?

ಶ್ರೀ ಶರಣಬಸಪ್ಪ ದರ್ಶನಾಪುರ(ಇಂಧನ ಸಚಿವರು):- ಹೌದು, ಲೆನ್‌ಮನ್‌ಗಳ ನೇಮಕಾತಿ ಬಗ್ಗೆ ಸರ್ಕಾರವು ತೀವ್ರವಾಗಿ ಆಲೋಚಿಸಿದೆ. ಈ ಬಗ್ಗೆ ಶೀಘ್ರವಾಗಿ ನಿರ್ಧಾರವನ್ನು

ತೆಗೆದುಕೊಳ್ಳಲಾಗುವುದು.

ಇಲ್ಲ, ಈ ಕೆಲಸವನ್ನು ಖಾಸಗಿಯವರಿಗೆ ವಹಿಸುವ ಬಗ್ಗೆ ಸರ್ಕಾರವು ಆಲೋಚಿಸಿಲ್ಲ.

ವಿಷಯ:- ಕುಮಟಾ- ಅಂಕೋಲಾ ಮಧ್ಯೆ ವಿದ್ಯುತ್ ಲೈನ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 106(396)

ಶ್ರೀ ವಿಶ್ವೇಶ್ವರ ಹೆಗ್ಗಡೆ(ಅಂಕೋಲ):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಕುಮಟಾ-ಅಂಕೋಲಾ ಮಧ್ಯೆ ವಿದ್ಯುತ್ ಲೈನ್ ಯಾವ ವರ್ಷದಲ್ಲಿ ಹಾಕಲಾಗಿದೆ. ಅದರಲ್ಲಿ ವಿದ್ಯುತ್ ಸರಾಗವಾಗಿ ಸಾಗುತ್ತಿದೆಯೇ?

ಆ) ಅಂಕೋಲಾ ನಗರಕ್ಕೆ ಕಾರವಾರದಿಂದ ವಿದ್ಯುತ್ ಪೂರೈಕೆ ಸಮರ್ಪಕವಾಗಿದೆಯೇ?

ಶ್ರೀ ಶರಣಬಸಪ್ಪ ದರ್ಶನಾಪುರ

(ಇಂಧನ ರಾಜ್ಯ ಸಚಿವರು):-

(ಅ) ಕುಮಟಾ- ಅಂಕೋಲಾ 33 ಕೆ.ವಿ. ವಿದ್ಯುತ್ ಲೈನು 1961ರಿಂದ ಕಾರ್ಯ ನಿರ್ವಹಿಸುತ್ತಿದೆ. ಕೆಲವೊಮ್ಮೆ ಈ ವಿದ್ಯುತ್ ಲೈನಿನಲ್ಲಿ ಉಂಟಾಗುವ ದೋಷಗಳಿಂದ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುತ್ತದೆ.

(ಆ) ಸಾಮಾನ್ಯವಾಗಿ ಅಂಕೋಲಾಕ್ಕೆ ಕುಮಟಾದಲ್ಲಿರುವ 110 ಕೆ.ವಿ.ಸ್ಟೇಷನ್ನಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. ಕುಮಟಾ-ಅಂಕೋಲಾ ನಡುವಿನ ವಿದ್ಯುತ್ ಲೈನು ದೋಷಪೂರಿತಗೊಂಡಾಗ ಮಾತ್ರ, ಪರ್ಯಾಯ ವ್ಯವಸ್ಥೆಯಾಗಿ ಕಾರವಾರದಿಂದ ಅಂಕೋಲಾಕ್ಕೆ ವಿದ್ಯುತ್ ಸರಬರಾಜನ್ನು ಮಾಡಲಾಗುವುದು.

ವಿಷಯ:- ಸಣ್ಣ ನೀರಾವರಿ ಇಲಾಖೆಯನ್ನು ಲೋಕೋಪಯೋಗಿ ಇಲಾಖೆಗೆ ವಿಲೀನಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 107(205)

ಶ್ರೀ ಬಿ.ಎಸ್.ಯಡಿಯೂರಪ್ಪ(ಶಿಕಾರಿಪುರ):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಸಣ್ಣ ನೀರಾವರಿ ಇಲಾಖೆಯನ್ನು ಲೋಕೋಪಯೋಗಿ ಇಲಾಖೆಯೊಡನೆ ಈ ಹಿಂದೆ ಏತಕ್ಕೆ ವಿಲೀನಗೊಳಿಸಲಾಗಿತ್ತು; ಪುನಃ ಏತಕ್ಕಾಗಿ ವಿಭಜನೆಗೊಳಿಸಲಾಯಿತು?

ಆ) ದಿನಾಂಕ: 29ನೇ ಮೇ 1996ರಂದು ಲೋಕೋಪಯೋಗಿ ಇಲಾಖೆಯಿಂದ ಸಣ್ಣ ನೀರಾವರಿ ಇಲಾಖೆಯನ್ನು ಬೇರ್ಪಡಿಸಿದ್ದು, ಈವರೆಗೆ ಬೇರ್ಪಡಿಸಿರುವ ಉಪ ವಿಭಾಗಗಳು ಕಾರ್ಯಾರಂಭ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಶಿಕಾರಿಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕಾಮಗಾರಿಗಳು ಹೆಚ್ಚು ಇದ್ದು ಈ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಉಪ ವಿಭಾಗವನ್ನು ಪ್ರಾರಂಭಿಸುವ ವಿಷಯ ಸರ್ಕಾರದ ಯಾವ ಹಂತದಲ್ಲಿದೆ?